


**ಪ್ರತಿ ವರ್ಷ ಭಾರತದಲ್ಲಿ 10 ಲಕ್ಷ ಯುವಜನರು ಹೊಸದಾಗಿ ಉದ್ಯೋಗ ಮಾರುಕಟ್ಟೆ ಪ್ರವೇಶಿಸುತ್ತಾರೆ. ಇಷ್ಟೂ ಮಂದಿಗೆ ಕೆಲಸ ಕೊಡುವುದು ಸರ್ಕಾರದ ಮುಂದಿರುವ ಬಹುದೊಡ್ಡ ಸವಾಲು.**

ಗೋವಾದಲ್ಲಿ ನಡೆದ ಬ್ರಿಕ್ಸ್ ಸಭೆ



ಜಾಗತೀಕರಣದ ಯುಗದೊಂದಿಗೆ ಆರಂಭವಾದ ಭಾರತೀಯರ ವಾಹನಗಳ ದಾಹ, ಈಗ ಬಯಕೆಯ ಗೌರಿಶಂಕರಕ್ಕೇರಿದೆ. ವರ್ಷಕ್ಕೆ ಸುಮಾರು 2 ಕೋಟಿ ವಾಹನಗಳ ಮಾರಾಟ ಎಂದರೆ ತಮಾಷೆಯ ಸಂಗತಿಯಲ್ಲ. ಅದರಲ್ಲೂ ಸುಮಾರು 30 ಲಕ್ಷದಷ್ಟು ಕಾರುಗಳು. ಪ್ರತಿವರ್ಷ ಹೀಗೆ ವಾಹನಗಳ ಸಂಖ್ಯೆ ಏರುತ್ತಾ ಹೋದರೆ ಪರಿಸರಕ್ಕೆ ಉಗುಳುವ ಹೊಗೆಯನ್ನು ಲೆಕ್ಕ ಹಿಡಿಯುವುದೂ ಕಷ್ಟವೇ. ಪರಿಸರ ಮಾಲಿನ್ಯವನ್ನು ತಡೆಯುವುದು ತುರ್ತಾಗಿ ಆಗಬೇಕಾದ ಕೆಲಸ. ಹೀಗಾಗಿ ಆರಂಭದ ಆತಂಕದ ಹೊರತಾಗಿಯೂ ಜನಸಾಮಾನ್ಯರು ಈ ನಿರ್ಬಂಧದ ಕ್ರಮವನ್ನು ಸ್ವಾಗತಿಸಿದರು.

ವರ್ಷದ ಆರಂಭದಲ್ಲಿ ಹೀಗೆ ಆರಂಭವಾದ ನಿರ್ಬಂಧ ಪರಂಪರೆ, ವರ್ಷದ ಕೊನೆಯಲ್ಲಿ 500 ಮತ್ತು 1000 ರೂಪಾಯಿಗಳ ನೋಟುಗಳ ನಿಷೇಧದೊಂದಿಗೆ ಹೊಸ ಮಜಲನ್ನು ತಲುಪಿತು. ವರ್ಷದ ಮಧ್ಯೆಭಾಗದಲ್ಲಿ ಬಂದ ರಿಯೊ ಒಲಿಂಪಿಕ್ಸ್ ಪದಕಗಳ ರಾಷ್ಟ್ರೀಯ ಸಂಭ್ರಮವನ್ನು ಬಿಟ್ಟರೆ ಒಂದರ್ಥದಲ್ಲಿ 2016 'ನಿಷೇಧದ ವರ್ಷ'ವೇ. ವರ್ಷವಿಡೀ ಒಂದಲ್ಲ ಒಂದು ರೀತಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ 'ನಿಷೇಧಾಜ್ಞೆ'ಗಳು ಜಾರಿಯಲ್ಲಿ ಇದ್ದುದು ಈ ವಾದಕ್ಕೆ ಪುಷ್ಟಿ ನೀಡುವಂತಿವೆ. ಅದರಲ್ಲೂ ಹಣಕಾಸು ವಹಿವಾಟಿಗೆ ಸಂಬಂಧಿಸಿ ಭಾರತೀಯ ರಿಸರ್ವ್ ಬ್ಯಾಂಕ್ ವರ್ಷದ ಕೊನೆಗೆ ತಂದ ನಿಷೇಧಾಜ್ಞೆಗಳು ಒಂದೆರಡಲ್ಲ. ಬ್ಯಾಂಕುಗಳ ಮೂಲಕವೇ ವಹಿವಾಟು ಮಾಡಿ; ನಗದು ಚಲಾವಣೆ ಕಡಿಮೆ ಮಾಡಿ; ಬ್ಯಾಂಕುಗಳಿಂದ ಇಂತಿಷ್ಟೇ ಹಣ ತೆಗೆಯಿರಿ; ಕಾರ್ಡ್‌ಗಳನ್ನೇ ಬಳಸಿ– ಹೀಗೆ ಹತ್ತಾರು ನಿರ್ಬಂಧ, ನಿಷೇಧಗಳ ಸರ್ಕಾರಿ ಆದೇಶಗಳ ಮಧ್ಯ ಸಿಕ್ಕು ಜನಸಾಮಾನ್ಯರು ಹೈರಾಣವಾದರು.

ಹಾಗೆ ನೋಡಿದರೆ ವರ್ಷದ ಕೊನೆಯ ಈ ನೋಟು ನಿಷೇಧ ಉಪಕ್ರಮವೇ ನಮ್ಮ ಇಡೀ ವರ್ಷದ ಒಟ್ಟು ಸಾಧನೆಗಳನ್ನು ನಿರ್ಧರಿಸುವಂತಿದೆ. ಸಾಮಾನ್ಯವಾಗಿ ವರ್ಷದ ಕೊನೆಯಲ್ಲಿ ಕುಳಿತು, ಇಡೀ ವರ್ಷದಲ್ಲಿ ನಡೆದ ರಾಜಕೀಯ ವಿದ್ಯಮಾನ, ಸಾಮಾಜಿಕ ಬದಲಾವಣೆ, ಹಣಕಾಸಿನ ಏರಿಳಿತ, ವಾಹನ ಮಾರಾಟ, ಷೇರುಪೇಟೆಯ ವಹಿವಾಟು, ಒಟ್ಟು ದೇಶೀಯ ಉತ್ಪಾದನೆಯ ವೃದ್ಧಿ ದರ– ಹೀಗೆ ಎಲ್ಲವನ್ನೂ ಲೆಕ್ಕ ಹಾಕಲಾಗುತ್ತದೆ. ಆದರೆ ಈ ವರ್ಷ ಎಲ್ಲದರ ಮೇಲೆ ನೋಟ್ ನಿಷೇಧದ ಕರಿನೆರಳು ಬಿದ್ದಿದೆ. ಸೆಪ್ಟೆಂಬರ್‌ವರೆಗೆ ಒಂದೇ ಸಮನೆ ಏರಿಕೆಯಾದ ವಾಹನಗಳ ಮಾರಾಟ ಕೊನೆಯ ಎರಡು ತಿಂಗಳಲ್ಲಿ ಏಕ್‌ದಂ ಕುಸಿದಿದೆ. '2016ರಲ್ಲಿ ಭಾರತದ ಆರ್ಥಿಕ ವೃದ್ಧಿದರವು ಒಟ್ಟು ದೇಶೀಯ ಉತ್ಪಾದನೆಯ ಶೇಕಡಾ 7.6 ರಷ್ಟಿ ಇರಲಿದ್ದು ಜಗತ್ತಿನಲ್ಲೇ ಅತ್ಯಂತ ವೇಗವಾಗಿ ವೃದ್ಧಿಯಾಗುತ್ತಿರುವ ಆರ್ಥಿಕತೆಯಿದು' ಎಂದು ವರ್ಷದ ಆರಂಭದಲ್ಲಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜು ಮಾಡಿತ್ತು. ವಿಶ್ವಬ್ಯಾಂಕ್ ಕೂಡಾ ಇದನ್ನು ದೃಢೀಕರಿಸಿತ್ತು. ಆದರೆ ವರ್ಷದ ಕೊನೆಗೆ ಕೆಲವು ಅಂತರರಾಷ್ಟ್ರೀಯ ರೇಟಿಂಗ್ ಸಂಸ್ಥೆಗಳು, ನೋಟು ನಿಷೇಧದಿಂದಾಗಿ ಭಾರತದ ಆರ್ಥಿಕ ವೃದ್ಧಿ ದರವು ಶೇಕಡಾ 3.5ರಷ್ಟು ಕುಸಿಯಲಿದೆ ಎಂದು ಪ್ರಕಟಿಸಿವೆ.

ಚಲನಶೀಲ ಆರ್ಥಿಕತೆಯಲ್ಲಿ ಉದ್ಯೋಗ ಸೃಷ್ಟಿ ಮಹತ್ವದ ಪಾತ್ರ ವಹಿಸುತ್ತದೆ. ಪ್ರತಿ ವರ್ಷ ಭಾರತದಲ್ಲಿ 10 ಲಕ್ಷ ಯುವಜನರು ಹೊಸದಾಗಿ ಉದ್ಯೋಗ ಮಾರುಕಟ್ಟೆ ಪ್ರವೇಶಿಸುತ್ತಾರೆ. ಇಷ್ಟೂ ಮಂದಿಗೆ ಕೆಲಸ ಕೊಡುವುದು ಸರ್ಕಾರದ ಮುಂದಿರುವ ಬಹುದೊಡ್ಡ ಸವಾಲು. ಈ ವರ್ಷ ಉದ್ಯೋಗ ಮಾರುಕಟ್ಟೆಯಲ್ಲಿ ಹೊಸ ಉದ್ಯೋಗಗಳ ಸೃಷ್ಟಿಯಲ್ಲಿ ಅಂತಹ ಯಾವ ಸಾಧನೆಯೂ ದಾಖಲಾಗಿಲ್ಲ. ಇದರ ಬದಲಾಗಿ ನೋಟು ನಿಷೇಧದಿಂದಾಗಿ ಸುಮಾರು 4 ಲಕ್ಷದಷ್ಟು ಹಾಲಿ ಉದ್ಯೋಗಗಳು ನಷ್ಟ ಹೊಂದಿವೆ ಎಂದು ಅಂದಾಜಿಸಲಾಗಿದೆ. ಮಾರುಕಟ್ಟೆಯಲ್ಲಿ ಹಣದ ಹರಿವು